ಉದ್ಯೋಗವಾಣಿ

ಶಿಕ್ಷಣವು ಹುಲಿಯ ಹಾಲಿದಂತೆ ಅದನ್ನು ಕುಡಿದವರು ಘರ್ಜಿಸಲೆಬೇಕು.
– ಡಾ.ಬಿ.ಆರ್.ಅಂಬೇಡ್ಕರ್

ಸಂಪಾದಕರು: ಭೀಮು.ದೊರೆ | ಏಪ್ರಿಲ್ 2026 । ಸಂಪುಟ 01 । ಸಂಚಿಕೆ 01 । ಪುಟ 02 | ಗಮನಿಸಿ: ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಭಾರತೀಯ ಸೇನೆಯಲ್ಲಿ "ಅಗ್ನಿವೀರ್" ಭರ್ತಿ

ಭಾರತೀಯ ಸೇನೆಯು ಅಗ್ನಿಪಥ್ ಯೋಜನೆಯಡಿ 2027ನೇ ಸಾಲಿನ ನೇಮಕಾತಿ ವರ್ಷಕ್ಕೆ ಸೇನೆಯ ವಿವಿಧ ವಿಭಾಗಗಳಿಗೆ ಅಗ್ನಿವೀರ್ ಹುದ್ದೆಗಳ ಭರ್ತಿಗಾಗಿ ಅಧಿಸೂಚನೆ ಹೊರಡಿಸಿದೆ.

ಜನರಲ್ ಡ್ಯೂಟಿ, ಜಿಡಿ–ಮಹಿಳಾ ಮಿಲಿಟರಿ ಪೊಲೀಸ್, ಟೆಕ್ನಿಕಲ್, ಸಿಪಾಯಿ ಫಾರ್ಮಾ, ಕ್ಲರ್ಕ್/ಸ್ಟೋರ್ ಕೀಪರ್ ಟೆಕ್ನಿಕಲ್, ಟ್ರೇಡ್ಸ್‌ಮೇನ್ ವಿಭಾಗಗಳಿಗೆ ಅವಿವಾಹಿತ ಪುರುಷ ಹಾಗೂಮಹಿಳಾ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಎಸ್ಸೆಸ್ಸೆಲ್ಸಿಮತ್ತು ಸಂಬಂಧಿತ ವಿಷಯದಲ್ಲಿ ಪಿಯುಸಿ ಅಭ್ಯಾಸ ಮಾಡಿರುವವರು ಅರ್ಜಿ ಸಲ್ಲಿಸಬಹುದು. ಆಸಕ್ತ ಮತ್ತು ಅರ್ಹರು ಏ.10ರೊಳಗೆ ಭಾರತೀಯ ಸೇನೆ ಅಧಿಕೃತ ವೆಬ್ ಸೈಟ್ https://www.joinindianarmy.nic.in/BRAVOUserLogin.htm ಭೇಟಿ ನೀಡಿ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ.

ಅಭ್ಯರ್ಥಿಯು ಅರ್ಜಿ ಸಲ್ಲಿಸಲು ಕನಿಷ್ಠ 17.1/2 ವರ್ಷದವರಾಗಿರಬೇಕು ಹಾಗೂ ಗರಿಷ್ಠ ವಯಸ್ಸಿನ ಮಿತಿಯು 22 ವರ್ಷವಾಗಿದೆ.

ಆಯ್ಕೆ ಪ್ರಕ್ರಿಯೆ:

- ಆನ್‌ಲೈನ್ ಸಾಮಾನ್ಯ ಪ್ರವೇಶ ಪರೀಕ್ಷೆ (ಅಇಇ)
- ಅಭ್ಯರ್ಥಿಗಳ ಶಾರ್ಟ್ ಲಿಸ್ಟ್
- ದಾಖಲೆ ಪರಿಶೀಲನೆ
- ದೈಹಿಕ ಸಾಮರ್ಥ್ಯ ಪರೀಕ್ಷೆ/ ವೈದ್ಯಕೀಯ ಪರೀಕ್ಷೆ
- ಅಂತಿಮ ಮೆರಿಟ್ ಪಟ್ಟಿ

ಹುದ್ದೆಗಳ ಆಧಾರಿತವಾಗಿ ವಿದ್ಯಾರ್ಹತೆ

ಅಗ್ನಿವೀರ್(ಜನರಲ್ ಡ್ಯೂಟಿ)/ಅಗ್ನಿವೀರ್(ಮಹಿಳಾ ಮಿಲಿಟರಿ ಪೊಲೀಸ್) ಹುದ್ದೆಗಳಿಗೆ: ಶೇ.45% ಅಂಕಗಳೊಂದಿಗೆ 10ನೇ ತರಗತಿಯಲ್ಲಿ ಉತ್ತೀರ್ಣ.

ಅಗ್ನಿವೀರ್ (ಟೆಕ್ನಿಕಲ್) ಹುದ್ದೆಗೆ: ಶೇ.12ನೇ ತರಗತಿಯಲ್ಲಿ ವಿಜ್ಞಾನ, ಭೌತಶಾಸ್ತ್ರ, ಗಣಿತ, ಇಂಗ್ಲೀಷ್ ಉತ್ತೀರ್ಣ.

ಅಗ್ನಿವೀರ್ (ಗುಮಾಸ್ತ/ಸ್ಟೋರ್ ಕೀಪರ್ ತಾಂತ್ರಿಕ) ಹುದ್ದೆಗೆ: ಶೇ.12ನೇ ತರಗತಿಯಲ್ಲಿ ಕಲಾ, ವಾಣಿಜ್ಯ ಅಥವಾ ವಿಜ್ಞಾನ ವಿಭಾಗದಲ್ಲಿ ಕನಿಷ್ಠ ಶೇ.50 ಅಂಕದೊಂದಿಗೆ ಉತ್ತೀರ್ಣ.

ಅಗ್ನಿವೀರ್ ಟ್ರೇಡ್ಸ್‌ಮ್ಯಾನ್(10 ನೇ ಪಾಸ್) ಹುದ್ದೆಗೆ: ಎಸ್ಸೆಸ್ಸೆಲ್ಸಿ ತೇರ್ಗಡೆ.

ಅಗ್ನಿವೀರ್ ಟ್ರೇಡ್ಸ್‌ಮ್ಯಾನ್(08 ನೇ ಪಾಸ್) ಹುದ್ದೆಗೆ: ಎಂಟನೇ ತರಗತಿ ತೇರ್ಗಡೆ.

ಸಿಪಾಯಿ ಫಾರ್ಮಾ ಹುದ್ದೆಗೆ: ಎಸ್ಸೆಸ್ಸೆಲ್ಸಿ ಜೊತೆಗೆ ಶೇ.50ರಷ್ಟು ಅಂಕಗಳೊಂದಿಗೆ ಡಿ.ಫಾರ್ಮಾ ತೇರ್ಗಡೆ.

ಸೋಲ್ಜರ್ ಟೆಕ್ನಿಕಲ್ ಹುದ್ದೆಗೆ: 12ನೇ ತರಗತಿಯಲ್ಲಿ ವಿಜ್ಞಾನ ವಿಭಾಗದಲ್ಲಿ ಭೌತಶಾಸ್ತ್ರ, ರಾಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಇಂಗ್ಲೀಷ್ ಪ್ರತಿ ವಿಷಯದಲ್ಲಿ ಶೇ.40ರಷ್ಟು ಅಂಕಗಳೊಂದಿಗೆ ತೇರ್ಗಡೆ.

ಓಂಬುಡ್ಸ್‌ಪರ್ಸನ್ಸ್ ಹುದ್ದೆಗಳ ನೇಮಕ

ಬೆಂಗಳೂರು: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನ ಸಂಬಂಧ ಸ್ವೀಕೃತವಾಗುವ ದೂರುಗಳ ವಿಲೇವಾರಿ ಮತ್ತು ಕುಂದುಕೊರತೆಗಳ ನಿವಾರಣೆಗಾಗಿ ವಿವಿಧ ಜಿಲ್ಲೆಗಳಿಗೆ ಓಂಬುಡ್ಸ್‌ಪರ್ಸನ್ಸ್ ನೇಮಕಾತಿಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಸೂಚನೆ ಹೊರಡಿಸಿದೆ. ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಬೀದರ್, ಚಿತ್ರದುರ್ಗ, ದಾವಣಗೆರೆ, ಗದಗ, ಹಾಸನ, ಕೊಪ್ಪಳ, ಕೋಲಾರ ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಅಭ್ಯರ್ಥಿಗಳನ್ನು ಭರ್ತಿ ಮಾಡಿಕೊಳ್ಳಲಿದೆ. ಇದು ಅರೆಕಾಲಿಕ ಹುದ್ದೆಯಾಗಿದ್ದು, ಆಸಕ್ತಿ ಹೊಂದಿರುವ ಅಭ್ಯರ್ಥಿಗಳು ಅಧಿಕೃತ ಜಾಲತಾಣ(**rdpr.karnataka.gov.in**)ದ ಮೂಲಕ ಅರ್ಜಿ ನಮೂನೆ ಡೌನ್ಲೋಡ್ ಮಾಡಿ, ಭರ್ತಿ ಮಾಡಿ ಜೊತೆಗೆ ನಿಗದಿತ ದಾಖಲೆಗಳನ್ನು

ಏ.24 ರೊಳಗೆ ಅರ್ಜಿ ಸಲ್ಲಿಸಿ

ಲಗತ್ತಿಸಿ ಏ.24ರೊಳಗೆಖುದ್ದಾಗಿ ಅಥವಾ ಅಂಚೆ ಮೂಲಕ 'ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. 5ನೇ ಮಹಡಿ,ಪ್ಯಾಟ್ ನಂ.1243, ಕೆಎಸ್‌ಐಐಡಿಸಿ ಕಟ್ಟಡ ಐಟಿ ಪಾರ್ಕ್, ಸೌತ್ ಬ್ಲಾಕ್,ರಾಜಾಜಿನಗರ ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು–560010' ವಿಳಾಸಕ್ಕೆ ತಲುಪುವಂತೆ ಸಲ್ಲಿಸಬೇಕು.

ಒಟ್ಟು 2801 ಸ್ಥಾನಗಳಿಗೆ ಆಯ್ಕೆ । ಐಟಿಐ ಅರ್ಹತೆ
ದಕ್ಷಿಣ ಮಧ್ಯ ರೈಲ್ವೆಯಲ್ಲಿ 'ಅಪ್ರೆಂಟಿಸ್‌ಶಿಪ್'

ದಕ್ಷಿಣ ಮಧ್ಯ ರೈಲ್ವೆ(ಎಸ್‌ಸಿಆರ್) ಯು 2025–26ನೇ ಸಾಲಿಗೆ ಅಪ್ರೆಂಟಿಸ್ ಕಾಯ್ದೆಯಡಿ 2801 ಅಭ್ಯರ್ಥಿಗಳಿಗೆ ಅಪ್ರೆಂಟಿಸ್‌ಶಿಪ್ ತರಬೇತಿ ಒದಗಿಸಲಿದ್ದು, ರೈಲ್ವೆ ನೇಮಕಾತಿ ಕೋಶ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ.

ಎಸಿ ಮಶಿನಿಸ್ಟ್,ಕಾರ್ಪೆಂಟರ್,ಡೀಸೆಲ್ ಮೆಕಾನಿಕ್,ಎಲೆಕ್ಟ್ರಿಷಿಯನ್,ಎಲೆಕ್ಟ್ರಾನಿಕ್ ಮೆಕಾನಿಕ್ ಮತ್ತು ಫಿಟ್ಟರ್ ಸೇರಿದಂತೆ ಇತ–ರೆ ಟ್ರೇಡ್‌ಗಳಿಗೆ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡು,ತರಬೇತಿ ನೀಡಲಿದೆ. ಸಂಬಂಧಿತ ಟ್ರೇಡ್‌ನಲ್ಲಿ ಐಟಿಐ ಪ್ರಮಾಣ ಪತ್ರ ಹೊಂದಿರುವ ಬಾಲ್ಕಿ,ಬಳ್ಳಾರಿ,ಬೆಳಗಾವಿ,ಬೀದರ್,ಗುಲ್ಬರ್ಗ(ಕಲಬುರಗಿ),ರಾಯಚೂರು,ಯಾದಗಿರಿ ವ್ಯಾಪ್ತಿಗೆ ಒಳಪಡುವ ಆಸಕ್ತರು ನೋಂದಣಿಗಾಗಿ ಎಸ್‌ಸಿಆರ್ ಅಧಿಕೃತ ಜಾಲತಾಣ https://scr.onlineregister.org.in/home-ಕ್ಕೆ ಭೇಟಿ ನೀಡಿ.ನೋಂದಣಿಗೆ ಏ.11 ಕೊನೆಯದಿನವಾಗಿದೆ.



ದಕ್ಷಿಣ ಮಧ್ಯ ರೈಲ್ವೆ 2025–26 ಸಾಲಿನ ಅಪ್ರೆಂಟಿಸ್‌ಶಿಪ್ ತರಬೇತಿ ಆನ್‌ಲೈನ್ ಅರ್ಜಿ ನಮೂನೆ.

ಹೈಕೋರ್ಟ್‌ನಲ್ಲಿ ಕಾರ್ಯದರ್ಶಿ ಹುದ್ದೆ!

ಬೆಂಗಳೂರು: ಉಚ್ಚ ನ್ಯಾಯಾಲಯ(ಹೈಕೋರ್ಟ್) ಕಲ್ಯಾಣ ಕರ್ನಾಟಕ ಹಾಗೂ ಮೂಲ ಉಳಿಕೆ ವೃಂದದ ಸಹಾಯಕ ನ್ಯಾಯಾಲಯ ಕಾರ್ಯದರ್ಶಿ ಹುದ್ದೆಗಳ ನೇರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿದೆ.

ಕಲ್ಯಾಣ ಕರ್ನಾಟಕ ವೃಂದದ 04+07 ಬ್ಯಾಕ್‌ಲಾಗ್ ಸ್ಥಾನ, ಮೂಲ ಉಳಿಕೆ ವೃಂದದ 53+06 ಬ್ಯಾಕ್‌ಲಾಗ್ ಸ್ಥಾನ ಸೇರಿದಂತೆ ಒಟ್ಟು 70 ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಅರ್ಜಿ ಸಲ್ಲಿಸಲು ಏಪ್ರಿಲ್ 15ರವರೆಗೆ ಕಾಲಾವಕಾಶ ನೀಡಲಾಗಿದ್ದು, ಯಾವುದೇ ಪದವಿ ಜೊತೆಗೆ ಆಂಗ್ಲ ಶೀಘ್ರಲಿಪಿ ಪ್ರೌಢ ದರ್ಜೆ/ ಆಂಗ್ಲ ಶೀಘ್ರಲಿಪಿ ಪ್ರೋಫಿಶಿಯನ್ಸಿ ಮತ್ತು ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆ/ಆಂಗ್ಲ ಕಮರ್ಷಿಯಲ್ ಪ್ರಾಕ್ಟಿಸ್ /ಸೆಕ್ರೆಟೇರಿಯಲ್ ಪ್ರಾಕ್ಟಿಸ್ ಡಿಪ್ಲೋಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಜೊತೆಗೆ ಕಂಪ್ಯೂಟರ್ ನಿರ್ವಹಣಾ ಜ್ಞಾನ (ಕಂಪ್ಯೂಟರ್ ಬೇಸಿಕ್ಸ್ ಕೋರ್ಸಿನ ಪ್ರಮಾಣಪತ್ರ) ವನ್ನು ಹೊಂದಿರುವ ಅಭ್ಯರ್ಥಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಕೃತ ಜಾಲತಾಣ https://judiciary.karnataka.gov.in/recsubnotify.php?p=1149&stateNM=ಕ್ಕೆ ಭೇಟಿ ನೀಡಿ.

ನ್ಯಾಯಾಲಯದಲ್ಲಿ ಉದ್ಯೋಗ

ಯಾದಗಿರಿ: ಜಿಲ್ಲೆಯ ನ್ಯಾಯಾಲಗಳಲ್ಲಿ ಕಲ್ಯಾಣ ಕರ್ನಾಟಕ(ಸ್ಥಳೀಯ) ವೃಂದದ ಪ್ರೋಸೆಸ್ ಸರ್ವರ್(ಆದೇಶ ಜಾರಿಕಾರ) ಮತ್ತು ಪ್ಯೂನ್(ಸೇವಕ) ಹುದ್ದೆಗಳ ನೇರ ನೇಮಕಾತಿಗಾಗಿ ಯಾದಗಿರಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಅಧಿಸೂಚನೆ ಪ್ರಕಟಿಸಿದೆ.

ಪ್ರೋಸೆಸ್ ಸರ್ವರ್ 09 ಸ್ಥಾನ, ಪ್ಯೂನ್ 05 ಸ್ಥಾನ ಸೇರಿದಂತೆ ಒಟ್ಟು 14 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಭರ್ತಿ ಮಾಡಲಿದೆ. ಎಸ್ಸೆಸ್ಸೆಲ್ಸಿ ಓದಿದವರಿಗೆ ಇದೊಂದು ಉತ್ತಮ ಅವಕಾಶ, ಆಸಕ್ತರು ಏ.12ರೊಳಗೆ ಯಾದಗಿರಿ ಜಿಲ್ಲಾ ನ್ಯಾಯಾಲಯದ ಅಧಿಕೃತ ಜಾಲತಾಣ https://yadgir.dcourts.gov.in/online-recruitment/ಕ್ಕೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

ಖನಿಜ ಮತ್ತು ವಸ್ತು ತಂತ್ರಜ್ಞಾನ ಸಂಸ್ಥೆ: ಎಂಟಿಎಸ್ ನೇಮಕ

ಭುವನೇಶ್ವರಂ: ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ(ಅಖಖಖ)ಯಡಿ ಬರುವ ಪ್ರಮುಖ ಸಂಶೋಧನಾ ಸಂಸ್ಥೆಯಾಗಿರುವ ಖನಿಜ ಮತ್ತು ವಸ್ತು ತಂತ್ರಜ್ಞಾನ ಸಂಸ್ಥೆ(ಖಒಒಖಿ)ಯು ಮಲ್ಟಿ ಟಾಸ್ಕಿಂಗ್ ಸ್ಟಾಫ್ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿದೆ.

ಒಟ್ಟು 07 ಸ್ಥಾನಗಳಿಗೆ ಭರ್ತಿ ನಡೆಯಲಿದೆ. ಅರ್ಜಿ ಸಲ್ಲಿಸಲು ಏ.21ರವರೆಗೆ ಅವಕಾಶವಿದೆ. ಎಸ್.ಎಸ್.ಎಲ್.ಸಿ ಉತ್ತೀರ್ಣರಾದ 25 ವರ್ಷದೊಳಗಿನ ಆಸಕ್ತ ಮತ್ತು ಅರ್ಹ ಉದ್ಯೋಗಾಕಾಂಕ್ಷಿಗಳು ಐಎಂಎಂಟಿ ಅಧಿಕೃತ ಜಾಲತಾಣ ಛಣಣಥಿ://ತಿತಿತಿ.ಟಟಣ.ಡಿಭ.ಟಿ/ಕ್ಕೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

ಐಡಿಬಿಐ ಬ್ಯಾಂಕಿನಲ್ಲಿ ಸ್ಪೇಷಲಿಸ್ಟ್ ಆಫೀಸರ್‌ಗಳ ಭರ್ತಿ

ಇಂಡಸ್ಟ್ರಿಯಲ್ ಡೆವಲಪ್ಮೆಂಟ್ ಬ್ಯಾಂಕ್ ಆಫ್ ಇಂಡಿಯಾ(ಐಡಿಬಿಐ) ಬ್ಯಾಂಕ್ 33 ವಿವಿಧ ಸ್ಪೇಷಲಿಸ್ಟ್ ಆಫೀಸರ್ ಹುದ್ದೆಗಳ ಭರ್ತಿಗಾಗಿ ಅಧಿಸೂಚನೆಯನ್ನು ಹೊರಡಿಸಿದೆ.

ಡೆಪ್ಯೂಟಿ ಜನರಲ್ ಮ್ಯಾನೇಜರ್ 05 ಸ್ಥಾನಗಳು, ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ 11 ಸ್ಥಾನಗಳು, ಮ್ಯಾನೇಜರ್ 09 ಸ್ಥಾನಗಳು, ಜೂನಿಯರ್ ಅಸಿಸ್ಟೆಂಟ್ ಮ್ಯಾನೇಜರ್ 08 ಸ್ಥಾನಗಳಿಗೆ ನೇಮಕ ಪ್ರಕ್ರಿಯೆ ನಡೆಯಲಿದೆ. ಅರ್ಜಿ ಸಲ್ಲಿಸಲು ಮಾ.25 ರಿಂದ ಏ.08 ರವರೆಗೆ ಕಾಲಾವಕಾಶವಿದೆ. ಬ್ಯಾಂಕಿಂಗ್ ವಲಯದಲ್ಲಿ ವೃತ್ತಿ ಜೀವನವನ್ನು ಹುಡುಕುತ್ತಿರುವ ಆಸಕ್ತ ಮತ್ತು ಅರ್ಹ ಉದ್ಯೋಗಾಕಾಂಕ್ಷಿಗಳು ಐಡಿಬಿಐ ಅಧಿಕೃತ ಜಾಲತಾಣದ ಕರಿಯರ್ ವಿಭಾಗದಲ್ಲಿ ಲಭ್ಯವಿರುವ ಲಿಂಕ್(https://ibpsreg.ibps.in/idbscomar26/) ಮೂಲಕ ಅರ್ಜಿ ಸಲ್ಲಿಸಬಹುದು.

ಅರ್ಹತೆ: ಅಭ್ಯರ್ಥಿಗಳು ಮಾನ್ಯತೆ ಪಡೆದ ಮಂಡಳಿ ಅಥವಾ ವಿಶ್ವವಿದ್ಯಾಲಯದಿಂದ ಹುದ್ದೆಗಳಿಗೆ ಅನುಗುಣವಾಗಿ ಅಗತ್ಯವಿರುವ ಕೆಲಸದ ಅನುಭವದೊಂದಿಗೆ 12ನೇ ತರಗತಿ, ಡಿಪ್ಲೊಮಾ, ಬಿ.ಟೆಕ್/ಬಿ.ಇ, ಎಂ.ಎಸ್.ಸಿ, ಎಂಸಿಎ ಅಥವಾ ತತ್ಸಮಾನ ಸಂಬಂಧಿತ ಅರ್ಹತೆಗಳನ್ನು ಹೊಂದಿರಬೇಕು.

ವಯೋಮಿತಿ: ಕನಿಷ್ಠ ಮಿತಿ 25 ವರ್ಷ, ಗರಿಷ್ಠ ಮಿತಿ 50 ವರ್ಷ. ಸರ್ಕಾರಿ ನಿಯಮಗಳ ಪ್ರಕಾರ ವಯೋಮಿತಿ ಸಡಿಲಿಕೆ ಅನ್ವಯ.

ಅರ್ಜಿ ಶುಲ್ಕ: ಎಸ್ಸಿ, ಎಸ್ಟಿ ಹಾಗೂ ಪಿಡಬ್ಲ್ಯೂಡಿ ಅಭ್ಯರ್ಥಿಗೆ ರೂ.250. ಸಾಮಾನ್ಯ, ಒಬಿಸಿ ಹಾಗೂ ಇಡಬ್ಲ್ಯೂಎಸ್ ಅಭ್ಯರ್ಥಿಗೆ ರೂ.1050

ಐಸಿಎಐನಲ್ಲಿ ನಾನಾ ಹುದ್ದೆಗಳು

ವಿಶ್ವದ ಅತಿದೊಡ್ಡ ವೃತ್ತಿಪರ ಲೆಕ್ಕಪತ್ರ ಸಂಸ್ಥೆಯಾಗಿರುವ ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ(ICAI) ದಲ್ಲಿ ನಿರ್ದೇಶಕ(ಕಾನೂನು) ಮತ್ತು ನಾನಾ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗಳ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಒಟ್ಟು109ಸ್ಥಾನಗಳಿಗೆ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಅರ್ಜಿ ಸಲ್ಲಿಸಲು ಏ.15ರವರೆಗೆ ಕಾಲಾವಕಾಶ ನೀಡಲಾಗಿದ್ದು, ಹುದ್ದೆಗಳ ಅರ್ಹತಾ ಮಾನದಂಡಗಳನ್ನು ಅಧಿಕೃತ ಅಧಿಸೂಚನೆಯಲ್ಲಿ ಪರಿಶೀಲಿಸಿ, ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಸಂಸ್ಥೆಯ ಅಧಿಕೃತ ಜಾಲತಾಣ https://icaisr.onlineregistrationform.org/ICAISR/ಕ್ಕೆ ಭೇಟಿ ನೀಡಿ.

ಪುಟ್ಟ ಸುದ್ದಿಗಳು

ಫಲಿತಾಂಶ ಪ್ರಕಟ

ಬೆಂಗಳೂರು: 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ–1ರ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಇಂದು(ಏ.09) ಪ್ರಕಟಿಸಿದೆ.

ರಾಜ್ಯದಾದ್ಯಂತ ಪರೀಕ್ಷೆಗಳು ಫೆ.28 ರಿಂದ ಮಾ.17ವರೆಗೆ ಜರುಗಿದ್ದವು. ವಿದ್ಯಾರ್ಥಿಗಳು ಇಲಾಖೆಯ ಅಧಿಕೃತ ಜಾಲತಾಣಗಳಾದ https://karresults.nic.in/slpufirst26_1.asp ಹಾಗೂ ಕರ್ನಾಟಕ ಒನ್ ಮೊಬೈಲ್ ಅಪ್ಲಿಕೇಶನ್ ಮೂಲಕವೂ ಫಲಿತಾಂಶ ಪರಿಶೀಲಿಸಿಕೊಳ್ಳಬಹುದು.

ಕೀ ಉತ್ತರ ಬಿಡುಗಡೆ

ರೈಲ್ವೆ ನೇಮಕಾತಿ ಮಂಡಳಿಯು ತಾಂತ್ರಿಕೇತರ ಜನಪ್ರಿಯ ವರ್ಗಗಳ ಪದವಿ ಹಂತ(ಎನ್‌ಟಿಪಿಸಿ)ದ ಹುದ್ದೆಗಳ ನೇಮಕಾತಿಗಾಗಿ ಮಾ.16 ರಿಂದ 27ರವರೆಗೆ ನಡೆಸಲಾದ ಕಂಪ್ಯೂಟರ್ ಆಧಾರಿತ ಪರೀಕ್ಷೆ–1ರ ಕೀ ಉತ್ತರವನ್ನು ಸೋಮವಾರ ಪ್ರಕಟಿಸಿದೆ.

ಸಿಇಎನ್ ಸಂಖ್ಯೆ 06/2025ರಡಿ ಅಧಿಸೂಚಿಸಲಾದ ಒಟ್ಟು 5810 ಹುದ್ದೆಗಳ ಭರ್ತಿಗಾಗಿ ಪರೀ–ಕ್ಷೆ ನಡೆಸಲಾಗಿತ್ತು. ಪ್ರಕಟಿತ ಕೀ ಉತ್ತರಗಳಿಗೆ ಏ.12ರೊಳಗೆ ಪ್ರತಿ ಪ್ರಶ್ನೆಗೆ ರೂ.50ರಂತೆ ಜೊತೆಗೆ ಬ್ಯಾಂಕಿನ ಸೇವಾ ಪಾವತಿಸಿ, ಆಕ್ಷೇಪಣೆ ಸಲ್ಲಿಸಲು ಅವಕಾಶವಿದೆ. ಆರ್‌ಆರ್‌ಬಿ ಆಯಾ ಪ್ರಾದೇಶಿಕ ಅಧಿಕೃತ ಜಾಲತಾಣ https://indianrailways.gov.in/railwayboard/view_section.jsp?lang=0&id=0,7,1281ದಲ್ಲಿ ಲಭ್ಯವಿರುವ ಲಿಂಕ್ ಮೂಲಕ ಕೀ ಉತ್ತರಗಳನ್ನು ಪರಿಶೀಲಿಸಿಕೊಳ್ಳಿ.

ಅರ್ಜಿ ಗಡುವು ವಿಸ್ತರಣೆ

ಬೆಂಗಳೂರು: ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ವತಿಯಿಂದ 2024–25ನೇ ಸಾಲಿನಲ್ಲಿ ಡಿ.ಫಾರ್ಮದಲ್ಲಿ ಉತ್ತೀರ್ಣರಾದವರಿಗೆ ಫಾರ್ಮಸಿಸ್ಟ್ ಅಪ್ರೆಂಟಿಸ್ ತರಬೇತಿ ನೋಂದಣಿಯ ಅವಧಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಏ.14ರವರೆಗೆ ವಿಸ್ತರಿಸಿದೆ.

ಒಟ್ಟು 1000 ಸೀಟುಗಳಲ್ಲಿ ಮೊದಲ ಸುತ್ತಿನಲ್ಲಿ 123 ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಇನ್ನುಳಿದ ಸೀಟುಗಳನ್ನು ಎರಡನೇ ಸುತ್ತಿನಲ್ಲಿ ಭರ್ತಿ ಮಾಡಿಕೊಳ್ಳಲಿದೆ. ಅಭ್ಯರ್ಥಿಗಳಿಗೆ 11 ತಿಂಗಳು ತರಬೇತಿ ಒದಗಿಸಲಿದೆ. ಸರ್ಕಾರಿ ಕೋಟಾದಡಿ ಆಯ್ಕೆಯಾಗಿದ್ದವರಿಗೆ ಆದ್ಯತೆ ನೀಡಲಾಗುತ್ತದೆ. ಸರ್ಕಾರದ ರೋಸ್ಟರ್ ಪದ್ಧತಿಯಂತೆ ಮೀಸಲಾತಿ ನಿಯಮ ಅನುಸರಿಸಲಾಗುತ್ತದೆ. ಆಸಕ್ತರು ಕೆಇಎ ಅಧಿಕೃತ ಜಾಲತಾಣ ಛಣಣಥಿ://ಛಿಜಣಠಟಿಟುಟಿಜ.ಞಚಿಡಿಟಿಚಿಣಚಿಞಚಿ.ರಠತ.ಎಟಿ/ಞಜಚಿಡಿಜಛಿಡಿಣುಣ–ಟಜಟಿಣ_ಜಝಿಚಿಡಿಟಚಿ/ಜಿಠಡಿಟ/ಟಠರುಟಿ.ಛಿಠಿಥಕ್ಕೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

ಪ್ರಾಧ್ಯಾಪಕರ ನೇಮಕ

ರಾಯಚೂರು: ಇಲ್ಲಿನ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ(ಐಐಐಟಿಆರ್)ಯು ಸಹಾಯಕ ಪ್ರಾಧ್ಯಾಪಕ ಗ್ರೇಡ್–ಖ ಮತ್ತು ಖಖ ಹುದ್ದೆಗಳ ಭರ್ತಿಗಾಗಿ ಅಧಿಸೂಚನೆ ಹೊರಡಿಸಿದೆ.

ಒಟ್ಟು 08 ಸ್ಥಾನಗಳಿಗೆ ನೇಮಕ ನಡೆಯುತ್ತಿದೆ. ಅಭ್ಯರ್ಥಿಗಳು ಪಿಎಚ್.ಡಿ ಪೂರ್ಣಗೊಳಿಸಿರಬೇಕು. ಆಸಕ್ತ ಮತ್ತು ಅರ್ಹ ಉದ್ಯೋಗಾಕಾಂಕ್ಷಿಗಳು ಐಐಐಟಿಆರ್ ಅಧಿಕೃತ ಜಾಲತಾಣ ಛಣಣಥಿ://ಝಣಡಿ.ಚಿಛಿ.ಎಟಿ/ಛಿಚಿಡಿಜಜಢಿಕ್ಕೆ ಭೇಟಿ ನೀಡಿ, ಏ.20ರೊಳಗೆ ಅರ್ಜಿ ಸಲ್ಲಿಸಬಹುದು.

- ಅರ್ಜಿ ಸಲ್ಲಿಸಲು ಏ.20ಕೊನೆದಿನ

ಪಂಜಾಬ್ ಸಿಂಧ್ ಬ್ಯಾಂಕಿನಲ್ಲಿ 'ಎಲ್‌ಬಿಒ' ಭರ್ತಿ

ಪಂಜಾಬ್ ಮತ್ತು ಸಿಂಧ್ ಬ್ಯಾಂಕಿನಲ್ಲಿ ಸ್ಥಳೀಯ ಬ್ಯಾಂಕ್ ಅಧಿಕಾರಿ(ಎಲ್‌ಬಿಒ) ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಲಾಗಿದೆ.

ಒಟ್ಟು 1000 ಸ್ಥಾನಗಳು

ಕರ್ನಾಟಕಕ್ಕೆ 60 ಸ್ಥಾನ ಮೀಸಲು

ಅರ್ಜಿ ಸಲ್ಲಿಸಲು ಏ.20ರ ಗಡುವು

ವಯೋಮಿತಿ: 01–03–2026 ರಂತೆ; ಕನಿಷ್ಠ ಮಿತಿ 20 ವರ್ಷಗಳು, ಗರಿಷ್ಠ ಮಿತಿ 30 ವರ್ಷಗಳು.

ವಯೋಮಿತಿ ಸಡಿಲಿಕೆ: ಒಬಿಸಿ ಅಭ್ಯರ್ಥಿಗಳಿಗೆ 03 ವರ್ಷಗಳು, ಪ.ಜಾತಿ, ಪ.ಪಂಗಡ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ 05 ವರ್ಷಗಳು, ಪಿಡಬ್ಲ್ಯೂಬಿಡಿ ಅಭ್ಯರ್ಥಿಗಳಿಗೆ 10 ವರ್ಷಗಳು.

ಶೈಕ್ಷಣಿಕ ಅರ್ಹತೆ: ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ ಅಧಿಕೃತ ಅಧಿಸೂಚನೆಯ ಪ್ರಕಾರ ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಯಾವುದೇ ವಿಭಾಗದಲ್ಲಿ ಪದವಿ ಪೂರ್ಣಗೊಳಿಸಿರಬೇಕು ಹಾಗೂ ಯಾವುದೇ ಪರಿಶಿಷ್ಟ ವಾಣಿಜ್ಯ ಬ್ಯಾಂಕ್ ಅಥವಾ ಯಾವುದೇ ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನಲ್ಲಿ ಅಧಿಕಾರಿಯಾಗಿ ಕನಿಷ್ಠ 18 ತಿಂಗಳ ಶಾಖೆಯ ಅನುಭವವನ್ನು ಹೊಂದಿರಬೇಕು.

ಆಯ್ಕೆ ಪ್ರಕ್ರಿಯೆ:
- ಲಿಖಿತ ಪರೀಕ್ಷೆ
- ಸ್ಕ್ರೀನಿಂಗ್
- ವೈಯಕ್ತಿಕ ಸಂದರ್ಶನ
- ಅಂತಿಮ ಮೆರಿಟ್ ಪಟ್ಟಿ
- ಸ್ಥಳೀಯ ಭಾಷೆ ಪ್ರಾವೀಣ್ಯತೆ
- ಅಂತಿಮ ಆಯ್ಕೆ

ಅರ್ಜಿ ಶುಲ್ಕ: ಸಾಮಾನ್ಯ, ಇಡಬ್ಲ್ಯೂಎಸ್ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ ರೂ.850/–. ಪ.ಜಾತಿ, ಪ.ಪಂಗಡ ಹಾಗೂ ಪಿಡಬ್ಲ್ಯೂಡಿ ಅಭ್ಯರ್ಥಿಗಳಿಗೆ ರೂ.100/–

ವೇತನ ಶ್ರೇಣಿ: ಪ್ರತಿ ತಿಂಗಳು 48480–2000/7–62480–2340/2–67160–2680/7–85920.

ಅರ್ಜಿ ಸಲ್ಲಿಸುವುದು ಹೇಗೆ?

ಬ್ಯಾಂಕಿಂಗ್ ವಲಯದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಪದವೀಧರ ಉದ್ಯೋಗಾಕಾಂಕ್ಷಿಗಳು ಐಬಿಪಿಎಸ್‌ನ ಅಧಿಕೃತ ಜಾಲತಾಣ https://ibpsreg.ibps.in/psbmar26/ಕ್ಕೆ ಭೇಟಿ ನೀಡಿ.



'ಸ್ಪೇಷಲಿಸ್ಟ್ ಆಫೀಸರ್ಸ್' ನೇಮಕಾತಿ

ಸಾರ್ವಜನಿಕ ವಲಯದ ಬ್ಯಾಂಕಿನಲ್ಲೊಂದಾದ ಇಂಡಿಯನ್ ಬ್ಯಾಂಕ್ ವಿವಿಧ ವೃಂದದ ಸ್ಪೆಷಲಿಸ್ಟ್ ಆಫೀಸರ್(ಎಸ್‌ಒ) ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿದೆ.

ಮ್ಯಾನೇಜರ್, ಸೀನಿಯರ್ ಮ್ಯಾನೇಜರ್ ಹಾಗೂ ಅಸಿಸ್ಟೆಂಟ್ ಮ್ಯಾನೇಜರ್ ಸೇರಿದಂತೆ ಒಟ್ಟು 350 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಭರ್ತಿ ಮಾಡಿಕೊಳ್ಳಲಿದೆ. ಅರ್ಜಿ ಸಲ್ಲಿಸಲು ಏ.28ರವರೆಗೆ ಕಾಲಾವಕಾಶವನ್ನು ನೀಡಲಾಗಿದ್ದು, ಬ್ಯಾಂಕಿಂಗ್ ವಲಯದಲ್ಲಿ ವೃತ್ತಿ ಜೀವನವನ್ನು ಹುಡುಕುತ್ತಿರುವ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು IBPS ಅಧಿಕೃತ ವೆಬ್ಸೈಟ್ https://ibpsreg.ibps.in/ibsofeb26/ಗೆ ಭೇಟಿ ನೀಡಿ.

ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು:

ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಅಥವಾ ಸಂಸ್ಥೆಯಿಂದ ಆಯಾ ಹುದ್ದೆಗಳಿಗೆ ಅನುಗುಣವಾಗಿ ಯಾವುದೇ ವಿಭಾಗದಲ್ಲಿ ಪದವಿ, ಸಂಬಂಧಿತ ವಿಭಾಗದಲ್ಲಿ ಸ್ನಾತಕೋತ್ತರ ಪದವಿ, ಬಿ.ಇ/ ಬಿ.ಟೆಕ್, ಸಿ.ಎ/ಸಿ.ಎಫ್.ಎ, ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಖಅಂಖ) ಸದಸ್ಯ, ಫೈನಾನ್ಸ್ ವಿಷಯದಲ್ಲಿ ಪಿಜಿಡಿಬಿಎ/ಪಿಜಿಡಿಬಿಎಂ, ಎಂಬಿಎ ದಂತಹ ತತ್ಸಮಾನ ಅರ್ಹತೆಗಳನ್ನು ಹೊಂದಿರಬೇಕು. ಕನಿಷ್ಠ ಮಿತಿ 22–27 ವರ್ಷಗಳು. ಗರಿಷ್ಠ ವಯಸ್ಸಿನ ಮಿತಿ 31–45 ವರ್ಷಗಳು (ಹುದ್ದೆಗಳಿಗೆ ಅನುಗುಣವಾಗಿ ಬದಲಾಗುತ್ತದೆ) ವಯೋಮಾನದವರಾಗಿರಬೇಕು. ಹಾಗೂ ಒಬಿಸಿ ಅಭ್ಯರ್ಥಿಗಳಿಗೆ 03 ವರ್ಷಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ 05 ವರ್ಷಗಳು, ಪಿಡಬ್ಲ್ಯೂಬಿಡಿ ಅಭ್ಯರ್ಥಿಗಳಿಗೆ 10 ವರ್ಷಗಳವರೆಗೆ ವಯೋಮಿತಿ ಸಡಿಲಿಕೆ ನೀಡಲಾಗಿದೆ.

- ಅರ್ಜಿ ಸಲ್ಲಿಸಲು ಹಾಗೂ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ ಏಪ್ರಿಲ್ 28, 2026

ಆನ್‌ಲೈನ್ ಅರ್ಜಿಸಲ್ಲಿಸುವಾಗ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಪಿಡಬ್ಲ್ಯೂಬಿಡಿ ಅಭ್ಯರ್ಥಿಗಳು ರೂ.175 ಹಾಗೂ ಉಳಿದ ಎಲ್ಲಾ ವರ್ಗದ ಅಭ್ಯರ್ಥಿಗಳು ರೂ.1000 ಪಾವತಿಸಲಬೇಕಾಗುತ್ತದೆ.

ಸ್ಕೇಲ್–1 ಹುದ್ದೆಗಳಿಗೆ ತಿಂಗಳಿಗೆ ರೂ.48480–ರೂ.67160/–, ಸ್ಕೇಲ್–2ಹುದ್ದೆಗಳಿಗೆ ರೂ.64820–ರೂ.93960/–,ಸ್ಕೇಲ್–3 ಹುದ್ದೆಗಳಿಗೆ ರೂ.85920–ರೂ.105280/– ಸಂಬಳ ಒದಗಿಸಲಾಗುವುದು ಎಂದು ಅಧಿಕೃತ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ತಜ್ಞ ವೈದ್ಯರು, ವೈದ್ಯಾಧಿಕಾರಿಗಳ ನೇಮಕಾತಿಗೆ ಅರ್ಜಿ ಆಹ್ವಾನ

ಯಾದಗಿರಿ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಾಲಯದ ಅಧೀನ ಆರೋಗ್ಯ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ತಜ್ಞ ವೈದ್ಯರು, ವೈದ್ಯಾಧಿಕಾರಿಗಳನ್ನು ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಮಹೇಶ ಬಿರಾದಾರ ಅವರು ತಿಳಿಸಿದ್ದಾರೆ.

ಮಕ್ಕಳ ತಜ್ಞ 4 ಹುದ್ದೆ, ಅರವಳಿಕೆ ತಜ್ಞ 8 ಹುದ್ದೆ, ಪ್ರಸೂತಿ ತಜ್ಞ 8 ಹುದ್ದೆ, ಫೀಜಿಶಿಯನ್ ಜಿ.ಎಮ್ 2 ಹುದ್ದೆ, ಹಿರಿಯ ವೈದ್ಯಾಧಿಕಾರಿಗಳು ಎಮ್‌ಬಿಬಿಎಸ್ 1 ಹುದ್ದೆ, ಸಾಮಾನ್ಯ ಕರ್ತವ್ಯ ವೈದ್ಯರು 3 ಹುದ್ದೆ, ಕಿವಿ ಮೂಗು & ಗಂಟಲು ತಜ್ಞ 1 ಹುದ್ದೆ ಹಾಗೂ ಚರ್ಮ ರೋಗ ತಜ್ಞ 2 ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ಭರ್ತಿ ಮಾಡಲಾಗುವುದು. ಆಕ್ತರು ಏ.16ರ ಒಳಗೆ ಅರ್ಜಿ ಸಲ್ಲಿಸಬೇಕು.

ತಜ್ಞ ವೈದ್ಯರಿಗೆ ರೂ.1,00,000 ಗಳ ಹಾಗೂ ವೈದ್ಯಾಧಿಕಾರಿಗೆ ರೂ.60,000ಗಳ ಮಾಸಿಕ ವೇತನ ನಿಗದಿಪಡಿಸಲಾಗಿದೆ.

ಒಂದು ವೇಳೆ ಈ ಹುದ್ದೆಗಳು ಭರ್ತಿಯಾಗದಿದ್ದಲ್ಲಿ ಪ್ರತಿ ಗುರುವಾರ ಹುದ್ದೆ ಭರ್ತಿಯಾಗುವವರೆಗೆ ನೇರ ಸಂದರ್ಶನದ ಮೂಲಕ ಭರ್ತಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂ.ಸಂ. 9449843067, 9008281552ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಿಖಿತ ಪರೀಕ್ಷೆ, ಸಂದರ್ಶನದ ಮೂಲಕ ಆಯ್ಕೆ | ಒಟ್ಟು 82 ಸ್ಥಾನಗಳು

ಬಳ್ಳಾರಿ ಡಿಸಿಸಿ ಬ್ಯಾಂಕಿನಲ್ಲಿ ವಿವಿಧ ಉದ್ಯೋಗಾವಕಾಶ

ಹೊಸಪೇಟೆ: ಇಲ್ಲಿನ ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ(ಡಿಸಿಸಿ ಬ್ಯಾಂಕ್)ದಲ್ಲಿ ಕಲ್ಯಾಣ ಕರ್ನಾಟಕ ಮತ್ತು ಮೂಲ ಉಳಿಕೆ ವೃಂದದಡಿ ವಿವಿಧ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವ್ಯವಸ್ಥಾಪಕ/ಪ್ರಥಮ ದರ್ಜೆ ಸಹಾಯಕ(ಎಫ್‌ಡಿಎ) 22 ಸ್ಥಾನಗಳು, ದ್ವಿತೀಯ ದರ್ಜೆ ಸಹಾಯಕ(ಎಸ್‌ಡಿಎ) 28 ಸ್ಥಾನಗಳು, ಓರ್ವ ವಾಹನ ಚಾಲಕ, ಕಿರಿಯ ಸೇವಕರು 31 ಸ್ಥಾನಗಳಿಗೆ ಸೇರಿದಂತೆ ಒಟ್ಟು 82 ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಿದೆ.

ಅಭ್ಯರ್ಥಿಗಳು ಮೇ 06ರಂತೆ ಕನಿಷ್ಠ 18 ವರ್ಷಗಳು ಹಾಗೂ ಪ.ಜಾತಿ, ಪ.ಪಂಗಡ ಮತ್ತು ಹಿಂದುಳಿದ ವರ್ಗಗಳ ಪ್ರವರ್ಗ–1ರ ಅಭ್ಯರ್ಥಿಗಳು 40 ವರ್ಷ, ಇತರೆ ಹಿಂದುಳಿದ ವರ್ಗಗಳಾದ 2ಎ, 2ಬಿ, 3ಎ ಮತ್ತು 3ಬಿಗೆ ಸೇರಿದ ಅಭ್ಯರ್ಥಿಗಳು 38 ವರ್ಷ ಮತ್ತು ಇತರೆ ವರ್ಗದ ಅಭ್ಯರ್ಥಿಗಳು 35 ವರ್ಷ ವಯೋಮಿತಿ ಹೊಂದಿರಬೇಕು. ಸರ್ಕಾರಿ ನಿಯಮಗಳ ಪ್ರಕಾರ, ವಿಕಲಚೇತನ(10 ವರ್ಷ), ವಿಧವೆ ಮಹಿಳೆ(10 ವರ್ಷ) ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ವಯೋಮಿತಿ ಸಡಿಲಿಕೆ ನೀಡಲಾಗಿದೆ.



ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ(ಡಿಸಿಸಿ ಬ್ಯಾಂಕ್) ನೇಮಕಾತಿ 2026ರ ಆನ್‌ಲೈನ್ ಅರ್ಜಿ ನಮೂನೆಯ ಚಿತ್ರಪಟ.

ಆಯ್ಕೆಯಾದಅಭ್ಯರ್ಥಿಗಳಿಗೆ ಆಯಾ ಹುದ್ದೆಗಳಿಗೆ ಅನುಗುಣವಾಗಿ, ವ್ಯವಸ್ಥಾಪಕ/ಪ್ರಥಮ ದರ್ಜೆ ಸಹಾಯಕ(ಎಫ್‌ಡಿಎ)ಹುದ್ದೆಗೆ ರೂ.44425 ರಿಂದ ರೂ.83700/–, ದ್ವಿತೀಯದರ್ಜೆ ಸಹಾಯಕ(ಎಸ್‌ಡಿಎ)ಹುದ್ದೆಗೆರೂ.34100 ರಿಂದ ರೂ.67600/–,ವಾಹನಚಾಲಕ ಹುದ್ದೆಗೆ ರೂ.31775 ರಿಂದ ರೂ.61300/–, ಕಿರಿಯ ಸೇವಕ ಹುದ್ದೆಗೆ ರೂ.29600 ರಿಂದ ರೂ.52800/– ರಂತೆ ಮಾಸಿಕ ಸಂಬಳ ನೀಡಲಾಗುವುದು. ಯಾವುದೇಪದವಿ/ಪಿಯುಸಿ/ಎಸ್ಸೆಸ್ಸೆಲ್ಸಿ ಅರ್ಹತೆ ಹೊಂದಿರುವವರು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ ಲಿಂಕ್(https://manageexam.com/BDCCB/index.html) ಮೂಲಕ ಸಾಮಾನ್ಯ ಮತ್ತು ಇತರೆ ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ರೂ.1,000ರಂತೆ, ಪ.ಜಾತಿ, ಪ.ಪಂಗಡ, ಪ್ರವರ್ಗ–1, ಹಾಗೂ ವಿಕಲಚೇತನ ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳು ರೂ.500ರಂತೆ ಪಾವತಿಸಿ, ಮೇ 06ರೊಳಗೆ ಅರ್ಜಿ ಸಲ್ಲಿಸಬಹುದು.

ವಿದ್ಯಾರ್ಹತೆ:

- **ವ್ಯವಸ್ಥಾಪಕ/ಪ್ರಥಮ ದರ್ಜೆ ಸಹಾಯಕ(ಎಫ್‌ಡಿಎ):** ಯಾವುದೇ ಪದವಿ
- **ದ್ವಿತೀಯ ದರ್ಜೆ ಸಹಾಯಕ(ಎಸ್‌ಡಿಎ):** ದ್ವಿತೀಯ ಪಿಯುಸಿ ಅಥವಾ ತತ್ಸಮಾನ ಅರ್ಹತೆ
- **ವಾಹನ ಚಾಲಕ:** ಎಸ್ಸೆಸ್ಸೆಲ್ಸಿ (ಕನ್ನಡ ಒಂದು ಭಾಷೆಯಾಗಿ ಓದಿರಬೇಕು) ಜೊತೆಗೆ ಡ್ರೈವಿಂಗ್ ಲೈಸನ್ಸ್ ಹೊಂದಿರಬೇಕು.
- **ಕಿರಿಯ ಸೇವಕ:** ಎಸ್ಸೆಸ್ಸೆಲ್ಸಿ (ಕನ್ನಡ ಒಂದು ಭಾಷೆಯಾಗಿ ಓದಿರಬೇಕು).

ಮುಖ್ಯ ಮಾಹಿತಿ

ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ: ಏಪ್ರಿಲ್ 06

ಅರ್ಜಿ ಸಲ್ಲಿಸಲು ಕೊನೆ ದಿನ: ಮೇ 06

ಅಧಿಕೃತ ಜಾಲ: www.bellarydcc.bank.in/